ಎಂ.ವಿ.ಸಿ. ನಂ.181/2023 ರಲ್ಲಿ
ಪಿ.ಡಬ್ಲ್ಯೂ-1(ನೇತ್ರಾವತಿ)

ದಿನಾಂಕ 19.01.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ದೂರಿನ ಯಥಾ ನಕಲನ್ನು ನಿಪಿ-1, ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ನಿಪಿ-2, ದೋಷಾರೋಪಣಾ ಪಟ್ಟಿಯ ಯಥಾ ನಕಲನ್ನು ನಿಪಿ-3, ಶವ ತನಿಖಾ ವರದಿಯ ಯಥಾ ನಕಲನ್ನು ನಿಪಿ-4, ಪಿ.ಎಂ ವರದಿಯ ಯಥಾ ನಕಲನ್ನು ನಿಪಿ-5, ಕೃತ್ಯ ಸ್ಥಳದ ಪಂಚನಾಮೆಯ ಯಥಾ ನಕಲನ್ನು ನಿಪಿ-6, ಕೃತ್ಯ ಸ್ಥಳದ ಕಚ್ಚಾ ನಕ್ಷೆಯ ಯಥಾ ನಕಲನ್ನು ನಿಪಿ-7, ವಾಹನ ಅಮಾನತು ಪಂಚನಾಮೆಯ ಯಥಾ ನಕಲನ್ನು ನಿಪಿ-8, ಸರ್ವೇ ನಂ.49 ಹಾಗೂ 73/1 ರ 2 ಗಣಕೀಕೃತ ಪಹಣಿಗಳ ಆನ್‌ಲೈನ್ ಪ್ರತಿಗಳನ್ನು ಕ್ರಮವಾಗಿ ನಿಪಿ-9 ಮತ್ತು ನಿಪಿ-10, ನನ್ನ ಗಂಡನ, ನನ್ನ ಹಾಗೂ ನನ್ನ ಮಕ್ಕಳ ಆಧಾರ್ ಕಾರ್ಡ್‌ಗಳ ನೋಟರೈಸ್ಡ್ ಪ್ರತಿಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-14 ಎಂದು ಗುರುತಿಸಲಾಯಿತು. ಅರ್ಜಿಯನ್ನು ಪುರಸ್ಕರಿಸುವಂತೆ ಕೋರುತ್ತೇನೆ.

ನಿಪಿ-11 ರಿಂದ ನಿಪಿ-14 ರ ಮೂಲ ದಾಖಲೆಗಳನ್ನು ಸಾಕ್ಷಿದಾರರು ಹಾಜರುಪಡಿಸಿದ್ದು, ನಿಪಿ-9 ನ್ನು ಮೂಲ ದಾಖಲೆಗಳೊಂದಿಗೆ ತಾಳೆ ನೋಡಿ ಮೂಲ ದಾಖಲೆಗಳು ಸಾಕ್ಷಿದಾರರ ದೈನಂದಿಕ ಕಾರ್ಯಗಳಿಗೆ

ಅವಶ್ಯಕತೆ ಇದೆ ಎಂದು ಹೇಳಿದ ಕಾರಣ ಮೂಲ ದಾಖಲೆಗಳನ್ನು ಅವಶ್ಯಕತೆ ಇದ್ದ ಪಕ್ಷದಲ್ಲಿ ಹಾಜರುಪಡಿಸುವ ಷರತ್ತಿಗೊಳಪಡಿಸಿ ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು.

ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದಃ-

ಈ ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ಗಂಡನ ದೊಡ್ಡಪ್ಪನ ಮಗ ಮಂಜುಗೌಡ ದೂರನ್ನು ದಾಖಲಿಸಿರುತ್ತಾರೆ. ಅಪಘಾತ ಸಂಭವಿಸಿರುವ ವಿಚಾರವನ್ನು ನನಗೆ ಸದರಿ ಮಂಜುಗೌಡ ರವರೇ ತಿಳಿಸಿರುತ್ತಾರೆ. ನಾನು ನನ್ನ ಗಂಡನನ್ನು ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿದ್ದು, ಆ ಸಮಯದಲ್ಲಿ ನನ್ನ ಗಂಡ ಮೃತ ಹೊಂದಿದ್ದರು. ಅಪಘಾತ ಹೇಗೆ ಸಂಭವಿಸಿತು ಎನ್ನುವ ವಿಚಾರವನ್ನು ನನ್ನ ಗಂಡನ ಅಣ್ಣ ಮಂಜುಗೌಡ ನನಗೆ ತಿಳಿಸಿದ್ದರು. ಮಂಜೇಗೌಡ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನ ನನ್ನ ಮಗ ವಿತೇಶ್/2 ನೇ ಅರ್ಜಿದಾರರಿಗೆ ಸೇರಿದ್ದು. ಸದರಿ ಬೈಕಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ಹಾಜರುಪಡಿಸಿದ್ದೇನೆ. ಮಂಜುಗೌಡ ರವರಿಗೆ ಚಾಲನಾ ಪರವಾನಗಿ ಇತ್ತು. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

2. ಅಪಘಾತ ಸಂಭವಿಸಿರುವುದು ರಾತ್ರಿ 12.30 ರ ಸಮಯದಲ್ಲಿ ಹಾಗೂ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ಎನ್ನುವುದು ನಿಜ. ಸದರಿ ರಸ್ತೆಗೆ ಹೊಂದಿಕೊಂಡಂತೆ ಸರ್ವೀಸ್ ರಸ್ತೆ ಇದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಬಸ್ಸಿನ ಎಡಬದಿಯ ಹಿಂಭಾಗಕ್ಕೆ ಮಂಜುಗೌಡ ರವರು ಹೋಗಿ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿರುವುದು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಮಂಜುಗೌಡರವರಾಗಲೀ ಅಥವಾ ನನ್ನ

ಗಂಡನಾಗಲೀ ಹೆಲ್ಮೆಟ್ ಧರಿಸಿರಲಿಲ್ಲ ಎನ್ನುವುದು ಸರಿಯಲ್ಲ. ಹೆಲ್ಮೆಟ್ ಧರಿಸಿದ್ದ ಪಕ್ಷದಲ್ಲಿ ಅದು ಸ್ಥಳದಲ್ಲಿ ಪೊಲೀಸರಿಗೆ ಸಿಗುತ್ತಿತ್ತು ಎನ್ನುವುದು ಹಾಗೂ ಆ ದಿನ ನನ್ನ ಗಂಡ ಹಾಗೂ ಮಂಜುಗೌಡ ಹೆಲ್ಮೆಟ್ ಧರಿಸಿರಲಿಲ್ಲ ಎನ್ನುವುದು ಸರಿಯಲ್ಲ. ಅಪಘಾತವು ಮಂಜುಗೌಡರವರ ತಪ್ಪಿನಿಂದಲೇ ಸಂಭವಿಸಿದ್ದು 1 ನೇ ಎದುರುದಾರರ ಬಸ್ಸಿನಿಂದ ಅಪಘಾತ ಸಂಭವಿಸಿಲ್ಲ ಎನ್ನುವುದು ಸರಿಯಲ್ಲ. ಸದರಿ ಬಸ್ ಚಾಲನೆಯಲ್ಲಿದ್ದಾಗ ಮಂಜುಗೌಡರವರು ಹಿಂದಿನಿಂದ ಬಸ್ಸಿಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿರುವುದು ಎನ್ನುವುದು ಸರಿಯಲ್ಲ. ನೀವು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲದ ಕಾರಣ ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀರಾ? ಎಂದರೆ ಸಾಕ್ಷಿಯು ಮಂಜುಗೌಡರವರನ್ನು ವಿಚಾರಣೆ ಮಾಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಮಗ ಹಾಗೂ ಮಗಳು ಇಬ್ಬರಿಗೂ ಮದುವೆಯಾಗಿವೆ? ಎಂದರೆ ಸಾಕ್ಷಿಯು ಮಗಳಿಗೆ ಮದುವೆಯಾಗಿದ್ದು, ಮಗನಿಗೆ ಮದುವೆಯಾಗಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ಊರಿನಲ್ಲಿ ಆಟೋ ಚಾಲನೆ ಮಾಡುತ್ತಾ ವ್ಯವಸಾಯ ಮಾಡಿಕೊಂಡಿದ್ದಾನೆ. ನನ್ನ ಮಗ ಬೆಂಗಳೂರಿನಲ್ಲಿ ಆಟೋರಿಕ್ಷಾ ಚಾಲನೆ ಮಾಡಿಕೊಂಡಿದ್ದು ನನ್ನ ಮಗಳು ಮದುವೆಯಾಗಿ ನಾನು ಒಬ್ಬಳೇ ಇರುವುದು ಎನ್ನುವುದು ಸರಿಯಲ್ಲ. ನಿಮ್ಮ ಗಂಡ ತೀರಿಕೊಂಡಾಗ ಅವರಿಗೆ 50 ವರ್ಷಕ್ಕೂ ಮೇಲ್ಪಟ್ಟು ವಯಸ್ಸಾಗಿತ್ತು? ಎಂದರೆ ಸಾಕ್ಷಿಯು 48 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ.

3. ನಿಮ್ಮ ಗಂಡ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದರು ಎನ್ನುವುದನ್ನು ಸಾಬೀತುಪಡಿಸಲು ದಾಖಲೆ ಹಾಜರುಪಡಿಸಬಹುದೇ? ಎಂದರೆ ಸಾಕ್ಷಿಯು ನನ್ನ ಗಂಡ ಮನೆಯ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ

ಮಾಡಿಕೊಂಡಿದ್ದು, ಸದರಿ ಮನೆಯವರು ಮನೆ ಖಾಲಿ ಮಾಡಿಕೊಂಡು ಹೋಗಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಬೆಂಗಳೂರಿನ ಸದಾಶಿವನಗರದಲ್ಲಿ ಕೆಲಸ ಮಾಡಿಕೊಂಡಿದ್ದರು. ನಿಮ್ಮ ಗಂಡನ ಗುರುತಿನ ಚೀಟಿಯನ್ನು ಹಾಜರುಪಡಿಸಬಹುದೇ? ಎಂದರೆ ಸಾಕ್ಷಿಯು ನನ್ನ ಗಂಡ ಸ್ವಂತವಾಗಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಮಾಸಿಕ 20,000/- ರೂಗಳ ಸಂಬಳವನ್ನು ನಗದಾಗಿ ಪಾವತಿಸುತ್ತಿದ್ದರು. ನನ್ನ ಗಂಡನಿಗೆ ಯಾವುದೇ ವೇತನ ಚೀಟಿಯನ್ನು ನೀಡಲಾಗುತ್ತಿರಲಿಲ್ಲ. ನನ್ನ ಗಂಡ ಯಾವುದೇ ಸೆಕ್ಯೂರಿಟಿ ಕೆಲಸ ಮಾಡುತ್ತಿರಲಿಲ್ಲ ಎನ್ನುವುದು ಹಾಗೂ ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ನನ್ನ ಗಂಡನ ಹೆಸರಿನೊಂದಿಗೆ ಆತನ ಅಣ್ಣ ತಮ್ಮಂದಿರ ಹೆಸರುಗಳು ಸಹ ಇವೆ ಎನ್ನುವುದು ನಿಜ. ನನ್ನ ಗಂಡ ತನ್ನ ಅಣ್ಣ ತಮ್ಮಂದಿರೊಂದಿಗೆ ಸೇರಿ ಮಾಸಿಕ 20,000/- ರೂಗಳ ವರಮಾನ ಹೊಂದಿದ್ದರು ಎನ್ನುವುದು ಸರಿಯಲ್ಲ. ಆಸ್ಪತ್ರೆಯ ಖರ್ಚು ವೆಚ್ಚಕ್ಕಾಗಿ ಎರಡೂವರೆ ಲಕ್ಷ ರೂಗಳಷ್ಟು ಖರ್ಚಾಗಿದೆ ಎಂದು ಹೇಳುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ.

4. ನನ್ನ ಗಂಡ ಪ್ರಯಾಣಿಸುತ್ತಿದ್ದ ಬೈಕಿನ ಮುಂಭಾಗ ಜಖಂಗೊಂಡಿತ್ತು. ಮಂಜುಗೌಡರವರ ಅಜಾಗರೂತಕೆಯಿಂದ ಅಪಘಾತ ಸಂಭವಿಸಿದ್ದು 1ನೇ ಎದುರುದಾರರ ಬಸ್ಸಿನ ಚಾಲಕನ ತಪ್ಪಿನಿಂದಲ್ಲ ಎನ್ನುವುದು ಸರಿಯಲ್ಲ. ಪರಿಹಾರ ಸಿಗಲಿ ಎಂಬ ಉದ್ದೇಶಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಎಂ.ವಿ.ಸಿ. ನಂ.181/2023 ರಲ್ಲಿ</u>
**ಪಿ.ಡಬ್ಲ್ಯೂ-1(ನೇತ್ರಾವತಿ)**

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.